Literacy for a Billion

Movie: Kindara Jogi
Year: 1989

Song: Gange Baare Tunge Baare
Lyricist: Hamsalekha

ಗಂಗೆ ಬಾರೆ ತುಂಗೆ ಬಾರೆ
ಬಾರೆ ನೀರೆ ದಾಹ ತೀರೆ
ಗಂಗೆ ಬಾರೆ ತುಂಗೆ ಬಾರೆ
ಬಾರೆ ನೀರೆ ದಾಹ ತೀರೆ
ಮಾರುತಪ್ಪಾ ಯಾವನಪ್ಪಾ
ನೀರು ಕೇಳೋನು
ಒಂಟಿ ಬಾವಿ ಊರಿನಲ್ಲಿ
ದಾಹ ಅನೋನು
ಮಾರುತಪ್ಪಾ ಯಾವನಪ್ಪಾ
ನೀರು ಕೇಳೋನು
ಒಂಟಿ ಬಾವಿ ಊರಿನಲ್ಲಿ
ದಾಹ ಅನೋನು
ಗಂಗೆ ಬಾರೆ ತುಂಗೆ ಬಾರೆ
ಬಾರೆ ನೀರೆ ದಾಹ ತೀರೆ
ಲಲಾ ಲಾಲಾ ಲಲಾ ಲಾಲಾ
ಲಲಾ ಲಾಲಾ ಲಲಾ ಲಾಲಾ

ರಾಮನೂರಿನಲ್ಲಿ ಇಂದು
ರಾಮನವಮಿಯು
ಪಾನಕ ಮಜ್ಜಿಗೆ ಬಿಟ್ಟು
ಯಾಕೆ ಕುಂತೆಯೋ
ನೀರು ಮಜ್ಜಿಗೆಗೆ ಇಲ್ಲಿ
ನೂರು ಗೌಡರು
ನಾನು ನೀನು ಎಂದುಕೊಂಡು
ಮಣ್ಣಿಗ್ಹೊಯ್ದರು

ಗಂಗೆ ಬಾರೆ ತುಂಗೆ ಬಾರೆ
ಬಾರೆ ನೀರೆ ದಾಹ ತೀರೆ

ನೀರಿಗೆಂದೂ ಬಣ್ಣ ಬಾರದು
ಪ್ರೀತಿಗೆಂದೂ ಕಣ್ಣು ಕಾಣದು
ಕಣ್ಣಿನಲ್ಲಿ ಪ್ರೀತಿ ಬಂದರೆ
ಪ್ರೇಮಿಗಳ ಮಾತೇ ಕೇಳದು
ಮಾರುತಪ್ಪಾ ಯಾವನಪ್ಪಾ
ಹೆಣ್ಣು ನೋಡೋನು
ಹಳದಿ ಕಣ್ಣಿನೂರಿನಲ್ಲಿ
ಕಣ್ಣು ಹಾಕೋನು
ಲಲ ಲಲ್ಲಲ ಲಾ
ಲಲ ಲಲ್ಲಲ ಲಾ
ಲಲ ಲಲ್ಲಲ ಲಾ
ಲಲ ಲಲ್ಲಲ ಲಾ

ಯಾವ ಊರೇ ನಿಂದು
ನಾನಿದ್ದ ಊರೇ ನಂದು
ಏನೇ ಹೆಸರು ನಿಂದು
ನಾ ಹೇಳಬಾರದಿಂದು
ಹೇಳಿದರೆ ಗಂಟು ಹೋಗದು
ನಾಚಿದರೆ ನಂಟು ಸೇರದು
ಕೈಯ ಬಿಡೋ ಕಿಂದರಿ ಜೋಗಿ
ಕಂಡು ಹಿಡಿಯೋ ಹೆಸರ ಕೂಗಿ
ಹೇಳು ಬಾ ಗಿಣಿ ಬಾ ಬಳಿ ಬಾ

Literacy for a Billion

ಲಲ ಲಾ ಲಾ ಲಲ ಲಾ ಲಲ ಲಾ
ಮಾರುತಪ್ಪಾ ಯಾವಳಪ್ಪಾ
ಹೀಗೆ ಬಂದೋಳು
ನೀರು ಕೊಟ್ಟು ಜೀವ
ಹೊತ್ತುಕೊಂಡು ಹೋದೋಳು
ಲಲ ಲಲ ಲಾ ಲಲ ಲಲ ಲಾ
ಲಲ ಲಲ ಲಾ ಲಲ ಲಲ ಲಾ
ಗಂಗೆ ಬಾರೆ ತುಂಗೆ ಬಾರೆ
ಬಾರೆ ನೀರೆ ದಾಹ ತೀರೆ

ನೀರು ಕೊಟ್ಟೆ ನೀನು
ನೀರಾಗಿ ಹೋದೆ ನಾನು
ಕಣ್ಣು ಬಿಟ್ಟೆ ನೀನು
ಕಲ್ಲಾಗಿ ಹೋದೆ ನಾನು
ನೋಡಿದರೆ ಆಸೆ ತೀರದು
ಹೇಳಿದರೆ ಮಾತು ಬಾರದು
ಹಾಡಿದರೆ ರಾಗ ಸಾಲದು
ಸೇರಿದರೆ ಜೀವ ನಿಲ್ಲದು
ಪ್ರೀತಿಸು ಗಿಳಿ ಬಾ ಬಳಿ ಬಾ
ಪ್ರೀತಿಸು ಗಿಳಿ ಬಾ ಬಳಿ ಬಾ
ಗಂಗೆ ಬಾರೆ ತುಂಗೆ ಬಾರೆ
ಆ ಆ ಆ ಆ
ಬಾರೆ ನೀರೆ ದಾಹ ತೀರೆ
ಆ ಆ ಆ ಆ
ಬಾರೆ ನೀರೆ ದಾಹ ತೀರೆ

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.

PlanetRead is a tax-exempt, not-for-profit: 501(c) (3) in the United States and 80(G) in India.